ಕಾಲದಲ್ಲಿ ಓದಬೇಕಾದ ಪುಸ್ತಕವೆಂದೋ ದೂರ ಇಡುವುದುಂಟು. ಆದರೆ ತತ್ತ್ವಜ್ಞಾನ ಬದುಕಿಗೆ ತೀರ ಹತ್ತಿರವಾದ ವಿಚಾರ. ಅದರ ಕುರಿತ ಆಸಕ್ತಿ ಯೌವ್ವನದಲ್ಲೇ ಮೂಡಿದರೆ, ಅರಿತ ವಿಚಾರವನ್ನು ಅನ್ವಯಿಸಿಕೊಳ್ಳಲು, ಪರೀಕ್ಷಿಸಿಕೊಳ್ಳಲು ಜೀವನದಲ್ಲಿ ಬಹಳಷ್ಟು ದೀರ್ಘ ಸಮಯವು ಲಭಿಸುತ್ತದೆ. ಭಾರತೀಯರಲ್ಲಿ ತತ್ತ್ವಜ್ಞಾನ ವಿಸ್ತಾರವಾದುದು ಮತ್ತು ಬೃಹತ್ ವಿಸ್ತಾರವಾದುದು. ಅದನ್ನು ಜನಪ್ರಿಯ ರೂಪದಲ್ಲಿ ಯಕ್ಷಗಾನವು ಜನರಿಗೆ ಕೊಡುತ್ತದೆ.

◆ **ನೀವು ಆಸ್ತಿಕರೋ ನಾಸ್ತಿಕರೋ ಎಂಬ ಪ್ರಶ್ನೆ ಅನೇಕರಿಗೆ ಇದೆ...**

ಆಸ್ತಿಕ ಮತ್ತು ನಾಸ್ತಿಕ ಎಂಬುದು ದೇವರ ಮೇಲಿನ ನಂಬಿಕೆಯನ್ನು ಆಧರಿಸಿದ ಮಾಡುವ ವಿಭಾಗ ಎಂದು ಇತ್ತೀಚೆಗೆ ಪ್ರಚಲಿತವಾಗಿದೆ. ಇತರ ಮತಪ್ರಭಾವಗಳಿಂದ ಈ ನಂಬಿಕೆಯು ಗಟ್ಟಿಗೊಳ್ಳುತ್ತ ಬಂದಿದೆ. ಆದರೆ ಹಿಂದಿನ ಕಾಲದಲ್ಲಿ ಆಲೋಚನೆಗಳು ಇನ್ನಷ್ಟು ಮುಕ್ತವಾಗಿಯೂ ವಿಶಾಲವಾಗಿಯೂ ಇದ್ದವು ಎನಿಸುತ್ತದೆ. ವೇದವನ್ನೊಪ್ಪಿದ ವ್ಯಕ್ತಿಯು ಆಸ್ತಿಕನೆಂದು ಪರಿಗಣಿಸಲ್ಪಡುತ್ತಿದ್ದನು. ಅವನು ದೇವರನ್ನು ಒಪ್ಪದೇ ಇದ್ದರೂ ಆಸ್ತಿಕನೇ ಎನ್ನಿಸಿಕೊಳ್ಳುತ್ತಿದ್ದ. ಅಂದರೆ ಕರ್ಮವೇ ಪ್ರಧಾನ ಎಂದು ಭಾವಿಸುವುದೇ ಮುಖ್ಯ ಎಂದು ಹಿಂದಿನವರು ನಂಬಿದ್ದರು. ಭಾರತೀಯ ತತ್ತ್ವಶಾಸ್ತ್ರದಲ್ಲಿ ದೇವರನ್ನು ಒಪ್ಪುವುದು-ಒಪ್ಪದೇ ಇರುವುದು ಅಷ್ಟು ಮುಖ್ಯ ವಿಷಯವಾಗಿ ಕಾಣುವುದಿಲ್ಲ. ಜ್ಞಾನ ಮುಖ್ಯವೇ, ಕರ್ಮ ಮುಖ್ಯವೇ, ವಸ್ತು ಸ್ವಭಾವನಿಯಮಗಳು ಯಾವುದು, ಮೋಕ್ಷವನ್ನು ಪಡೆಯುವುದಕ್ಕಾಗಿ ಯಾವುದು ಹೆಚ್ಚು ತಿಳಿವು ಕೊಟ್ಟೀತು ಎನ್ನುವುದು ಮುಖ್ಯ. ಆತ್ಮವೊಂದರ ಏಳ್ಗೆಯನ್ನು ಸದಾ ತಪಿಸುವುದು ಇಲ್ಲಿನ ರೂಢಿಯೆನ್ನಬಹುದು. ಇದೇ ಆಧಾರದಲ್ಲಿಯೇ ಚತುರ್ವಿಧ ಪುರುಷಾರ್ಥಗಳ ಪರಿಕಲ್ಪನೆಯಿದೆ. ವ್ಯಕ್ತಿಯೊಬ್ಬನು ತನ್ನನ್ನು ತಾನು ತಿದ್ದುಕೊಳ್ಳುತ್ತ, ವಿಕೃತಿಗಳನ್ನು ಕಳಚುತ್ತ ಕಳಚುತ್ತಾ ದೇವರೂ ಆಗಬಹುದು ಎನ್ನುವ ಅಪಾರ ಸಾಧ್ಯತೆಯು ಇಲ್ಲಿ ಅಡಗಿದೆ. ಈಗ ನೀವೇ ಹೇಳಿ, ನನ್ನ ಜೀವನವು ನಾಸ್ತಿಕವೋ ಆಸ್ತಿಕವೋ ಎಂದು? ದೇವಸ್ಥಾನಗಳಿಗೆ ಹೋಗುವುದು ಪ್ರಸಾದ ಸ್ವೀಕರಿಸುವುದುಂಟು. ದೇವಕರ್ಮಗಳಲ್ಲಿ ಭಾಗವಹಿಸುವುದುಂಟು. ಆದರೆ ಕಲೆಯೇ ದೇವರು ಎಂದು ಹೇಳುತ್ತೇನೆ. ತಂದೆ ತಾಯಿ ದೇವರು, ಗಿಡ ಮರ ಸೇರಿ ಈ ಪ್ರಕೃತಿ ದೇವರು, ನನ್ನ ಸ್ಕೂಟರ್ ದೇವರು, ಅನ್ನವಿಕ್ಕುವ ಹೆಂಡತಿ ದೇವರು, ಶಾಲೆಯೂ ದೇವರು ಎಂಬ ರೀತಿಯಲ್ಲಿ ನನ್ನ ಆಸ್ತಿಕ್ಯವಿದೆ. ಜಗತ್ತನ್ನು ಆಳುವ ವ್ಯಕ್ತಿಯಾಗಿ ದೇವನೊಬ್ಬ ಇದ್ದಾನೆಯೇ ಎಂಬ ಪ್ರಶ್ನೆ ಸದಾ ಚರ್ಚಾರ್ಹ ಆಗಿಯೇ ಉಳಿದಿದೆ.

◆ **ಭಾರತೀಯ ದರ್ಶನದಲ್ಲಿ ಶಂಕರಾಚಾರ್ಯ ಮತ್ತು ಮಂಡನಮಿಶ್ರರ ನಡುವಿನ ವಾದ-ಪ್ರತಿವಾದ ಬಹಳ ಪ್ರಸಿದ್ಧವಾದುದು. ಒಂದು ಸಿದ್ಧಾಂತವು ಮತ್ತೊಂದರ ಮುಂದೆ ಸಮರ್ಥವಾಗಿ ನಿಲ್ಲುವುದು ಸಾಧ್ಯವಾಗದೇ ಹೋದರೆ, ಅದು ಶರಣಾಗುವ ಪ್ರಕ್ರಿಯೆ ಒಂದು ರೀತಿಯ ಪ್ರಾಮಾಣಿಕತೆ, ವಿನಯ ಮತ್ತು ವಾಸ್ತವವನ್ನು ಒಪ್ಪಿಕೊಳ್ಳುವ ಸಹೃದಯತೆಯ ಪ್ರತೀಕ ಅಲ್ಲವೇ ? ಇಂದಿನ ಪರಿಸ್ಥಿತಿಯಲ್ಲಿ ಅಂದರೆ ಆಧುನಿಕ ಕಾಲದ ಈ ಹೊತ್ತಿನಲ್ಲಿ ಇಂತಹುದೊಂದು ಪ್ರಕ್ರಿಯೆ ನಡೆಯುವುದು ಸಾಧ್ಯವಿದೆಯೇ ?**

ಇಲ್ಲ, ಸಾಧ್ಯವೇ ಇಲ್ಲವೆನಿಸುತ್ತದೆ. ಯಾಕೆಂದರೆ ಇಂದು ಯಾವುದೇ ವಿಚಾರವನ್ನು ಜೀವನಾನುಭವದ ಒರೆಗೆ ಹಚ್ಚಿ ನೋಡುವ ಕ್ರಮವನ್ನು ನಾವು ಮರೆತುಬಿಟ್ಟಿದ್ದೇವೆ. ತತ್ತ್ವಶಾಸ್ತ್ರ ಸಿದ್ಧಾಂತಗಳು ಜೀವನಾನುಭವ, ಅಥವಾ ಮುಕ್ತವಾದ ಸಾಮಾಜಿಕ ಅವಲೋಕನದ ಫಲವಾಗಿ ಹುಟ್ಟುವಂಥವು. ಇಂದು ಒಂದು ಚರಣ ಕವಿತೆಯನ್ನೂ ರಾಜಕೀಯ ಬಣಕ್ಕೆ ಅಂಟಿಸುವ ಅಥವಾ ಜಾತಿಯ ಫಲಕಕ್ಕೆ ಅಂಟಿಸುವ, ಅನಂತರ ಅದನ್ನು ಓದುವ ಪದ್ಧತಿಯು ವ್ಯಾಪಕವಾಗಿಬಿಟ್ಟಿದೆ. ಬುದ್ಧನೆಂದರೆ 'ಹೀಗೆ' ಎಂದು ಹಣೆಪಟ್ಟಿ ಹಚ್ಚಿಬಿಡುವುದು... ಶಂಕರರೆಂದರೆ ಹೀಗೆ ಎಂದು ಸೀಮಿತ ವ್ಯಾಖ್ಯೆ ಮಾಡಿಬಿಡುವುದು ನಿಜಕ್ಕೂ ಬೇಸರದ ಸಂಗತಿ. ಎಷ್ಟೋ ಮಂದಿ ವೈದಿಕರ ಮನೆಯಲ್ಲಿ ಬುದ್ಧನ ಚಿತ್ರವಿದೆ, ಮೂರ್ತಿಯಿದೆ. ಬುದ್ಧನು ತನ್ನ ಜೀವನವನ್ನು ಅನುಭವದ ಒರೆಗೆ ಹಚ್ಚಿ ಉತ್ತುಂಗಕ್ಕೆ ಏರಿದ ವಿಧಾನವನ್ನು ಯಾರೇ ಆದರೂ ಗೌರವಿಸಬೇಕು. 'ಯಾರೋ ಹೀಗೆ ಉಪದೇಶ ಮಾಡಿದರು, ಆದ್ದರಿಂದ ನೀವು ಹೀಗೀಗೇ ಬಾಳಿ' ಎಂಬ